Sri H. M. CHANNABASAPPA (Minister for Public Works and Electricity) [On behalf of Sri D. DEVARAJ URS (Chief Minister)].—

(*a*) to (*f*) Data is not readly available and is being collected from all the Departments including field departments. Information will be collected and placed on the Table of the House.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಮಾಹಿತಿಯು ಸಿದ್ಧವಾಗಿ ದೊರೆಯುವುದಂತಿದ್ದು ಅದನ್ನು ಕ್ಷೇತ್ರ ಇಲಾಖೆಗಳನ್ನು ಒಳಗೊಂಡಂತೆ ಎಲ್ಲಾ ಇಲಾಖೆಗಳಿಂದ ಸಂಗ್ರಹಿಸಲಾಗುತ್ತಿದೆ ಎಂದು ಇಲ್ಲಿ ಉತ್ತರದಲ್ಲಿ ತಿಳಿಸಲಾಗಿದೆ. ಈ ಮಾಹಿತಿಯನ್ನು ಸಂಪೂರ್ಣವಾಗಿ ದೊರೆಸಿಕೊಡಲು ಸರ್ಕಾರಕ್ಕೆ ಯಾವಾಗ ಸಾಧ್ಯವಾಗುತ್ತದೆ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೆಚ್ಚಿನ ಮಾಹಿತಿಯನ್ನು ಕೇಳಿದ್ದೀರಿ. ಇದನ್ನೆಲ್ಲಾ ಅದಷ್ಟು ಬೇಗ ಒದಗಿಸಿಕೊಂಡು ತಮಗೆ ಕಳುಹಿಸುತ್ತೇನೆ, ಇಲ್ಲವೆ ಸಭೆಗೆ ಒದಗಿಸ ಬೇಕೆಂದರೂ ಒದಗಿಸೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಇದರಲ್ಲಿ ತುಂಬಾ ಅನ್ಯಾಯವಾಗಿರುವುದರಿಂದ ಸಭೆಯ ಮುಂದೆ ಈ ಪ್ರಶ್ನೆಯನ್ನು ತರಬೇಕಾಯಿತು. ಈ ವಿವರಗಳನ್ನು ಅದಷ್ಟು ಬೇಗ ಎಂದರೆ ಈ ಅಧಿವೇಶನ ಮುಗಿಯುವುದರೊಳಗಾಗಿ ತರಿಸಿ ಅದನ್ನು ಸಭೆಗೆ ಒದಗಿಸುವು ದಕ್ಕಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ವಿವರಗಳನ್ನು ಇಷ್ಟೇ ದಿನಗಳಲ್ಲಿ ಒದಗಿಸುತ್ತೇವೆ ಎಂದು ಹೇಳುವುದಕ್ಕಾಗದಿದ್ದರೂ, ತಮಗೆ ಈ ವಿವರಗಳನ್ನು ಅದಷ್ಟು ಬೇಗ ತರಿಸಿ ಒದಗಿ ಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೆ ; ಸರ್ಕಾರದಿಂದ ನನಗೇನೋ ತೃಪ್ತಿಕರ ವಾದ ಉತ್ತರ ದೊರೆಯಲಿಲ್ಲ. ಇದಕ್ಕೆ ತಾವೇ ಪರಿಹಾರವನ್ನು ಒದಗಿಸಿಕೊಡಬೇಕು.

ಅಧ್ಯಕ್ಷರು.—ಸರ್ಕಾರದವರು ಅದಷ್ಟು ಬೇಗ ತಮಗೆ ತಾವು ಕೇಳಿರತಕ್ಕ ವಿವರಗಳನ್ನು ತರಿಸಿ ಕೊಡುವುದಾಗಿ ಈಗತಾನೆ ತಿಳಿಸಿದ್ದಾರಲ್ಲ.

RELIEF MEASURES IN INDI TALUK

773. Sri J. L. KABADE (Ballolli).—

Will the Chief Minister be pleased to state :—

(*a*) the relief measures like irrigation tanks, lift irrigation schemes, common wells, etc., taken up by Government under scarcity works in Indi taluk in the months of January and February 1973;

(*b*) whether these schemes have been approved by the Government and their work actually started or not;

(*c*) if not, the reason for the same;

(*d*) whether it is a fact that one Chadachan Minor Irrigation tank is sanctioned without any scheme, plan and administrative approval;

† Indicates that the remarks or speeches have not been revised by the member concerned.

(*e*) the basis on which the Government has sanctioned the said Chadachan irrigation tank;

(*f*) whether the Government has prepared estimate and plans of Nandral and Arjnal tanks?

Sri H. M. CHANNABASAPPA (Minister for Public Works and Electricity) [On behalf of Sri D. DEVARAJ URS (Chief Minister)].—

(*a*) A minor irrigation work was taken up at Chadachan. The Mysore High Court have issued an interim order of stay restraining the Department from carrying out this work and as a result, the work has had to be suspended from 26th March 1973. Action is, however, being taken to get the stay vacated so that the work might be continued. Lift Irrigation Schemes have been started at the places mentioned below:

1. Sankh
2. Shirnal
3. Anachi.

(*b*) Yes—actually started.

(*c*) Does not arise.

(*d*) The work was administratively approved by the Government on the basis of a preliminary investigation report.

(*e*) This work was taken up as part of the comprehensive drought employment programme.

(*f*) No.

ಶ್ರೀ ಜೆ. ಎಲ್. ಕಬಾಡಿ.—(ತ) ಗೌ. ಉತ್ತರವಾಗಿ ಸರ್ಕಾರದವರು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದರು ಎಂದಿದೆ. ಈ ಪೂರ್ವಭಾವಿ ತಪಿಖಾ ವರದಿಯು ಸರ್ಕಾರಕ್ಕೆ ಬಂದುದು ಯಾವಾಗ ಮತ್ತು ಸರ್ಕಾರದವರು ಅದಕ್ಕೆ ಅನುಮೋದನೆ ನೀಡತಕ್ಕ ನಿರ್ಣಯವನ್ನು ತೆಗೆದುಕೊಂಡಿದ್ದು ಯಾವಾಗ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಸ್ಯಾಂಕ್ಷನ್ ಆದದ್ದು ತಾರೀಖು 18-1-1973 ರಲ್ಲಿ ಆದರೆ ವರದಿಗಳು ನಮಗೆ ಆಗಿಂದಾಗ್ಗೆ ಬರುತ್ತಲೇ ಇರುತ್ತವೆ. ನಾವು ನಮಗೆ ಬೇಕಾದ ವಿಷಯಗಳ ಬಗ್ಗೆ ಆಗಿಂದಾಗ್ಗೆ ವರದಿಗಳನ್ನು ತರಿಸಿಕೊಳ್ಳುತ್ತಲೇ ಇರುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಒಂದು ಕೆರೆಯನ್ನು ಮಂಜೂರು ಮಾಡುವ ಕಾಲಕ್ಕೆ, ಆದರ ಬಗ್ಗೆ ಸ್ಪಳ ಮಾಹಿತಿಯನ್ನು, ಅದರ ಬಗ್ಗೆ ವರದಿಯನ್ನು ತರಿಸಿಕೊಳ್ಳುವಾಗ್ಗೆ ಇಂಥಾ ಜಾಗದಲ್ಲಿ ಒಂದು ಕೆರೆಯನ್ನು ಕಟ್ಟುವುದರಿಂದ ಅಲ್ಲಿ ಭೂಮಿ ಸಳಿಗಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಅಗ್ರಿಕಲ್ಚರಲ್ ಇಲಾಖೆಯಿಂದ ಅಥವಾ ಅಧಿಕೃತ ಸಾಯಿಲ್ ಅನ್ನು ಕೆಮಿಕರ್ ಎಗ್ಜಾಮಿನೇಷನ್ ಮಾಡಿಸುವುದರ ಮೂಲಕ ತಿಳಿದ ನಂತರ ಈ ಮಂಜೂರಾತಿಯನ್ನು ಕೊಡಲಾಗಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಎರಡ್ನೂ ಮಾಪತಿಗಳನ್ನೂ ಆರಿತುಕೊಂಡೇ ಸರ್ಕಾರ ಮಂಜೂರಾತಿಯನ್ನು ನೀಡುವುದು. ಅಲ್ಲಿ ತಯಾರಾಗತಕ್ಕ ಅಂದಾಜುಗಳಲ್ಲಿ ಲೈನ್ ಅಂದಾಜು ಮತ್ತು ಟೆಕ್ನಿಕಲ್ ಅಂದಾಜು ಹೀಗೆ ಬೇರೆ ಬೇರೆ ಅಂದಾಜುಗಳು ಇವೆ. ಇದರಲ್ಲಿ ಟೆಕ್ನಿಕಲ್ ಮಂಜೂರಾತಿಯನ್ನು ಚೀಫ್ ಇಂಜಿನಿಯರ್ ಮಾಡುತ್ತಾರೆ. ಆದರೆ ಸರ್ಕಾರದವರು ಅಲ್ಲಿಯ ಡ್ಯಾಟ್ ಪರಿಸ್ಥಿತಿಯನ್ನು ಗಮನಿಸಿ ಇದಕ್ಕೆ ಅಡ್ಮಿನಿಪ್ರೇಟೀವ್ ಸ್ಯಾಂಕ್ಷನ್ನನ್ನು ನೀಡಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—ಅಲ್ಲಿ ಹೈಕೋರ್ಟಿನಿಂದ ತಡೆ ಆಜ್ಞೆ ಬಂದುದರಿಂದ ಜನರಿಗೆ ಕೆಲಸ ಸಿಕ್ಕದೆ ಬಹಳ ತೊಂದರೆಯಾಗಿದೆ. ಅಲ್ಲಿ ಸರ್ಕಾರದವರು ಬೇರೆ ಕೆಲಸ ಕೊಡುವುದಕ್ಕೆ ಅಂದರೆ ಸಾರ್ವಜನಿಕರ ಬಾವಿಗಳು—ಬಂಡ್ ಕೆಲಸ ಇತ್ಯಾದಿಗಳನ್ನಾದರೂ ಕೊಡಬಹುದಾಗಿತ್ತಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಮುಖ್ಯವಾಗಿ ಎರಡು ತಾಲ್ಲೂಕುಗಳಿಗೆ ಅಂದರೆ ಇಂಡಿ ಮತ್ತು ಸಿಂದಿಗಿಯಲ್ಲಿ ಎಷ್ಟು ಜನರಿಗೆ ಬೇಕಾದರೂ ಅಪ್ಪರ್ ಕೃಷ್ಣಾದಲ್ಲಿ ಕೆಲಸ ಕೊಡುವುದಕ್ಕೆ ಅವಕಾಶವಿದೆ. ಅಲ್ಲಿ ತಾವು ಪದೇ ಪದೇ ತಿಳಿಸುತ್ತಿದ್ದ ಚಡಚಣದ ಕೆರೆ ಕೆಲಸವನ್ನು ಕೈಗೊಂಡಿದ್ದಾಯಿತು. ಆದರೆ ಅಲ್ಲಿ ಯಾರೋ ಒಬ್ಬಾತ ಹೈಕೋರ್ಟಿನಿಂದ ಒಂದು ತಡೆಯಾಜ್ಞೆಯನ್ನು ತಂದ ಪ್ರಯುಕ್ತ ಅದನ್ನು ನಿಲ್ಲಿಸಬೇಕಾಗಿ ಬಂದಿತು. ಆದರೆ ಇಂಡಿ ತಾಲ್ಲೂಕಿನಲ್ಲಿ ಕೆನಾಲ್ ಕೆಲಸ ನಡೆಯುತ್ತಿದೆ. ಎಷ್ಟು ಜನರಿಗೆ ಬೇಕಾದರೂ ಕೆಲಸವನ್ನು ಒದಗಿಸುವುದಕ್ಕೆ ಸಾಧ್ಯವಿದೆ. ಅಲ್ಲ ಎಷ್ಟು ಜನ ಬಂದರೂ ಕೆಲಸ ದೊರೆಯುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಚಡಚಣ ಭಾಗದಲ್ಲಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮದ ಅಲುವಾಗಿ ನಾನು ಪ್ರಶ್ನೆ ಕೇಳಿದ್ದೇನೆ. ಅಪ್ಪರ್ ಕೃಷ್ಣ ಭಾಗದಲ್ಲಿ ಕೆಲಸ ಕೊಡುವುದು ಬೇರೆ ವಿಚಾರ. ಈ ಭಾಗದಲ್ಲಿ ಕೆಲಸ ತೆಗೆದುಕೊಳ್ಳದಿರುವುದರಿಂದ ಅಲ್ಲಿಯ ಜನರಿಗೆ ಸಾಕಷ್ಟು ತೊಂದರೆಯಾಗಿದೆ. ಚಡಚಣ ಕೆರೆ ಕೆಲಸ ತೆಗೆದುಕೊಳ್ಳುವುದಕ್ಕೆ ಪೂರ್ವದಲ್ಲಿ ಅಲ್ಲಿನ ನೀರು ಉಪಯೋಗಿಸುವುದರಿಂದ ಭೂಮಿಗೆ ಉಪಯೋಗವಾಗುತ್ತದೆಯೇ ಎಂದು ನೋಡಿ ಯೋಜನೆ ಮಂಜೂರು ಮಾಡಬೇಕಾಗಿತ್ತು. ಹಾಗೆ ಮಾಡಿದೆಯೇ ಎಂಬುದಕ್ಕೆ ಉತ್ತರ ಬಂದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸ್ಕೆಟು ಬೇಡ, ಬೇರೆ ಸ್ಕೆಟು ಬೇಕು ಎಂದು ಕೇಳಲಾಗಿದೆ.

ಶ್ರೀ ಜೆ. ಎಲ್. ಕಬಾಡಿ.—ಇಲ್ಲ, ನಾವು ಹೇಳಿರುವುದು ಬೇರೆ. ತಮ್ಮ ಪಕ್ಷದ ಮನವಿ ಪ್ರಕಾರ ಅವಶರವಲ್ಲಿ ಕೆಲವೊಂದು ಯೋಜನೆ ತೆಗೆದುಕೊಳ್ಳುವಿರಿ. ಆದರ ಬಗ್ಗೆ ವರದಿ ತರಿಸಿ, ಪ್ಲಾನು, ಎಸ್ಟಿಮೇಟು ಮಾಡಿ ತೆಗೆದುಕೊಳ್ಳಬೇಕೆ ತಮಗೆ ಬೇಕಾದವರ ಮನವಿಯ ಮೇಲೆ ಕೆಲಸ ತೆಗೆದುಕೊಳ್ಳುವುದಿದೆ ಅದು ತಪ್ಪು. ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ತೆಗೆದುಕೊಳ್ಳುವುದು ಯೋಗ್ಯವೇ ಎಂದು ಪರಿಶೀಲಿಸಿ ಸರಕಾರ ಮುಂದುವರೆದಿದೆಯೇ ? ಅಲ ಚಳಾ ನೀರಿರುವುದರಿಂದ ಉಪಯೋಗವಾಗುವುದಿಲ್ಲ ಎಂದು ವರದಿ ಇದ್ದರೂ ಆ ಕೆಲಸ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡಲಾಗುತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಊಹಾಪೋಹದಮೇಲೆ ಮಾತನಾಡುವುದು ತಪ್ಪು. ಈ ಚಡಚಣ ಕೆರೆ ಆಗಬೇಕು ಎಂದು ಒಂದು ಕಡೆ ಹಟ ಮಾಡುವರು, ಇನ್ನೊಂದು ಕಡೆ ಆಗಬೇಕು ಎಂದು ಇತರರು ಹಟ ಮಾಡುವರು. ಇದನ್ನು ಪರಿಶೀಲಿಸಿ ಕೆಳಮಟ್ಟದಲ್ಲಿ ಎಂಜಿನಿಯರು ತಪ್ಪು ಮಾಡಿರಬಹುದು ಎಂದು ಚೀಫ್ ಎಂಜಿನಿಯರು ಮತ್ತೆ ಪರಿಶೀಲಿಸಿದರು. ಒಂದು ಕಡೆ ಸ್ಕೆಟನ್ನು ಚುನಾಯಿಸಿದರೆ ಅದು ಸರಿಯಾಗಿಸೆ ಎಂದು ಕೆಲವರೂ ಸರಿಯಾಗಿಲ್ಲವೆಂದು ಕೆಲವರೂ ಹೇಳುವುದುಂಟು. ಇವಾಗಬೇಕು ಎಂದು ಒಂದು ಸಾವಿರ ಜನ, ಇವಾಗಬಾರದು ಎಂದು ಒಂದು ಸಾವಿರ ಜನ ಹೇಳುವಾಗ ಯೋಗ್ಯ ರೀತಿಯಲ್ಲಿ ಪರಿಶೀಲಿಸಿ ನೂಕ್ಕಾದ ರೀತಿಯಲ್ಲಿ ಕೆಲಸಮಾಡಬೇಕಾದ್ದು ಅವಶ್ಯಕ. ಹಾಗೆ ಮಾಡಿ ವರದಿ ತರಿಸಿ ಯೋಗ್ಯವೆಂದು ಕಂಡು ಮಂಜೂರುಮಾಡಿರುವುದಾಗಿದೆ. ಸರಕಾರ ಜವಾಬ್ದಾರಿಯಿಂದ ವರ್ತಿಸುವುದು. ಎಲ್ಲಾ ವರದಿಗಳನ್ನೂ ನೋಡಿ ಸರಿಯೆಂದು ಕಂಡ ರೀತಿಯಲ್ಲಿ ಮಂಜೂರುಮಾಡಿದೆ. ಎಲ್ಲಿ ಯಾವುದು ನೂಕ್ಕ ಎಂದು ನೋಡಿ ಕೆಲಸಮಾಡುವ ಜವಾಬ್ದಾರಿ ಸರಕಾರದಮೇಲಿದೆ.

ಶ್ರೀ ಜೆ. ಎಲ್. ಕಬಾಡಿ.—ಚಡಚಣದಲ್ಲಿ ಇರಿಗೇಷನ್ನಿಗೆ ಹೆಚ್ಚು ಅನುಕೂಲಮಾಡ ವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಬ್ಯಾರೇಜ್ ಲಫ್ಟ್ ಇರಿಗೇಷನ್ ಸ್ಕೀಮನ್ನು ಪ್ರಾರಂಭಿಸಲಾಗಿದೆ, ಬರಗುಂದ ಲಫ್ಟ್ ಇರಿಗೇಷನ್ ಸ್ಕೀಂ ಕೆಲಸ ಪೂರ್ಣವಾಗಿದೆ.